ಮೂಲ ದಾವಾ ನಂಃ 24/2019

ಪಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **15.11.2025.** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್.ಎಸ್.ಹೆಚ್ 1 ರಿಂದ 3 ನೇ ಪ್ರತಿವಾದಿಯರ ಪರ ವಕೀಲರಿಂದಃ**

ನಾನು ನನ್ನ ವಾದಪತ್ರದ 2 ನೇ ಪ್ಯಾರಾದಲ್ಲಿ ಕಾಣಿಸಿದ ದಾವಾಸ್ತಿಯ ವರ್ಣನೆ ನನ್ನ ಪ್ರಕಾರ ಸರಿ ಇದೆ. ದಾವಾಸ್ತಿಯ ಚೆಕ್ ಬಂದಿ ವರ್ಣನೆಯಲ್ಲಿ, ದಾವಾಸ್ತಿಯ ಪಶ್ಚಿಮಕ್ಕೆ 1 ನೇ ಪ್ರತಿವಾದಿಯ ಬಾಬ್ತು ಆಸ್ತಿಯ ಗಡಿ ಎಂದು ಕಾಣಿಸಿದ್ದು, ಅದು ಮನೆಯ ಗಡಿ ಆಗಿರುತ್ತದೆ. 1 ನೇ ಪ್ರತಿವಾದಿಯ ಮನೆಯ ಗಡಿಯವರಗೂ ನನ್ನ ಆಸ್ತಿಯಾಗಿರುತ್ತದೆಯೇ ಎಂದರೆ, ಸಾಕ್ಷಿಯು ಅಲ್ಲಿ 14 ಫೀಟಿನ ದಾರಿ ಇದ್ದು, 7 ಫೀಟಿನವರೆಗೂ ನನ್ನ ಆಸ್ತಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಇದನ್ನು ಪಶ್ಚಿಮ ದಿಕ್ಕಿಗೆ ಕಾಣಿಸಿದ್ದೀರಾ ಎಂದರೆ ಇಲ್ಲ. ನಾನು ಕಾಣಿಸಿದ ದಾವಾಸ್ತಿಯ ಪಶ್ಚಿಮ ದಿಕ್ಕಿನ ಚೆಕ್ ಬಂದಿ ಸದರಿ ಸಂಪೂರ್ಣ 14 ಫೀಟ್ ದಾರಿಯನ್ನು ನನ್ನದಾಗಿಸಿಕೊಳ್ಳಬೇಕೆಂಬ ಉದ್ದೇಶದಿಂದ ಈ ರೀತಿ 1 ನೇ ಪ್ರತಿವಾದಿ ಬಾಬ್ತು ಆಸ್ತಿಯ ಗಡಿ ಎಂದು ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ. ಪಶ್ಚಿಮ ದಿಕ್ಕಿಗೆ ಸದರಿ ದಾರಿ ಇರುವ ಬಗ್ಗೆ ನಾನು ನಮೂದು ಮಾಡುತ್ತಿದ್ದೆ ಎಂದರೆ, ಅದು ಗಾಂವಟಾನಾ ಜಾಗೆಯಾಗಿರುವುದರಿಂದ, ಅದನ್ನು ನಮೂದು ಮಾಡಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಮತ್ತು ಪ್ರತಿವಾದಿಯರ ಮನೆಯ ನಡುವೆ ಇರುವ ಖುಲ್ಲಾ ಜಾಗೆಯನ್ನು ಕಬಳಿಸುವ ಉದ್ದೇಶದಿಂದ, ಪಶ್ಚಿಮ ದಿಕ್ಕಿಗೆ ಇರುವ ದಾರಿಯನ್ನು ತೋರಿಸಿದ್ದು ಇರುವುದಿಲ್ಲ ಎಂದರೆ ಸುಳ್ಳು. ಈ ಬಗ್ಗೆ ಪ್ರತ್ಯೇಕವಾಗಿ ದಾವಾಸ್ತಿ ವರ್ಣನೆಯಲ್ಲಿ ನಮೂದಿಸಲು ತೊಂದರೆ ಇರಲಿಲ್ಲ. ಹಾಗೆ ಕಾಣಿಸಿದ್ದಲ್ಲಿ ನಾನು ಈ ದಾವೆಯಲ್ಲಿ ಕೇಳಿದ ಮಾಗಣೆಗೆ ತೊಂದರೆಯಾಗುತ್ತದೆ ಎಂಬ ಉದ್ದೇಶದಿಂದ ಕಾಣಿಸಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯಗಳು ನನಗೆ ಗೊತ್ತಿದ್ದರೂ ಸಹಿತ, ಸುಳ್ಳು ದಾವಾಸ್ತಿ ವರ್ಣನೆಯನ್ನು ತೋರಿಸಿದ್ದೇನೆ ಎಂದರೆ, ಸಾಕ್ಷಿಯು ಸರಿಯಾಗಿಯೇ ತೋರಿಸಿದ್ದೇನೆ ಎಂದು ನುಡಿಯುತ್ತಾರೆ.

ನಾನು ನನ್ನ ವಾದಪತ್ರದ 3 ನೇ ಪ್ಯಾರಾದಲ್ಲಿ ನಮ್ಮ ತಂದೆ ಯಾವ ರೀತಿ ಆಸ್ತಿಯನ್ನು ವರ್ಗಾವಣೆ ಮಾಡಿದ್ದಾರೆಂದು ನಮೂದು ಮಾಡಿದ್ದು ಇರುವುದಿಲ್ಲ ಎಂದರೆ, ಸಾಕ್ಷಿಯು ತಮ್ಮ ವಾದ ಪತ್ರದ 6 ನೇ ಸಾಲಿನಿಂದ ಅಂದರೇ "ಸನ್-1997 -------- ವಹಿಸಿಕೊಟ್ಟಿರುತ್ತಾನೆ" ಎಂದು ಎನ್ನುವುದನ್ನು ಓದಿ ಹೇಳಿರುತ್ತಾರೆ. ನಮ್ಮ ತಂದೆಯವರು ಮುಪ್ಪಿನವಸ್ಥೆಯಲ್ಲಿದ್ದಾಗ ನಾನು ಹೊರದೇಶದಿಂದ ಬಂದು, ನಾನೇ ಖುದ್ದು, ನಾನು ಹೇಳುವಂತಹ ವರದಿಯನ್ನು ಪಟ್ಟಣ ಪಂಚಾಯಿತಿಗೆ ನೀಡಿರುತ್ತೇನೆ ಎಂದರೆ ಸುಳ್ಳು. ಒಂದುವೇಳೆ ದಾವಾಸ್ತಿಯನ್ನು ನಮ್ಮ ತಂದೆಯವರು ನನ್ನ ಹೆಸರಿಗೆ ವರ್ಗಾವಣೆ ಮಾಡುವ ಇಚ್ಛೆ ಹೊಂದಿದ್ದಲ್ಲಿ ಅವರು ಕಾನೂನುಬದ್ಧವಾಗಿ ವರ್ಗಾವಣೆ ಮಾಡುತ್ತಿದ್ದರು ಎಂದರೆ, ಸಾಕ್ಷಿಯು ಅಂತಹ ಸಂದರ್ಭ ಆ ಸಮಯದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಸಮಯಕ್ಕೆ ನಾನು ಏನೆಂದು ಮತ್ತು ಯಾವ ಕಚೇರಿಗೆ ಅರ್ಜಿಯನ್ನು ನೀಡಿದ್ದೆನು ಎಂದರೆ, ಪಟ್ಟಣ ಪಂಚಾಯಿತಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಆಸ್ತಿಯ ಮಾಲೀಕರಿಗೆ ವರದಿಯನ್ನು ಅಥವಾ ಅರ್ಜಿಯನ್ನು ಕೊಡುವ ಅಧಿಕಾರವಿರುತ್ತದೆ ಎಂದರೆ ಸರಿ. ನನಗೆ ದಾವಾಸ್ತಿಯ ಬಗ್ಗೆ ನಿಖರವಾದ ಮಾಹಿತಿ ಇರದೇ ಇರುವ ಕಾರಣ, ದಾವಾಸ್ತಿಯ ಪಶ್ಚಿಮಕ್ಕೆ 1 ನೇ ಪ್ರತಿವಾದಿಯ ಬಾಬ್ತು ಆಸ್ತಿ ಗಡಿ ಎಂದು ಕಾಣಿಸಿರುತ್ತೇನೆ ಎಂದರೆ, ಸಾಕ್ಷಿಯು ನನಗೆ ಸದರಿಯವರ ಮನೆಯ ಗಡಿ ಬರುತ್ತದೆ ಎಂದು ನನಗೆ ತಿಳಿದಿದ್ದೆ ನಮೂದು ಮಾಡಿದ್ದೇನೆ ಎಂದು ನುಡಿಯುತ್ತಾರೆ.

ನಾನು ದಾವಾಸ್ತಿಯ ವರ್ಣನೆಯಲ್ಲಿ ಕಾಣಿಸಿದ ಪಶ್ಚಿಮ ದಿಕ್ಕಿನ ಚೆಕ್ ಬಂದಿಯನ್ನು ಮುಚ್ಚಿ ಹಾಕಿಕೊಳ್ಳುವ ಸಲುವಾಗಿ, ನಿಪಿ.9 ನ್ನು ಸೃಷ್ಟಿಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.9 ರಲ್ಲಿರುವ ವಿಷಯವನ್ನು ನಾನೇ

ಬರೆದುಕೊಂಡಿರುತ್ತೇನೆ ಎಂದರೆ ಸುಳ್ಳು. ನಿಪಿ.9 ರಲ್ಲಿನ ವಿಷಯಗಳನ್ನು ನಾನೇ ಬರೆದುಕೊಂಡು, 1 ರಿಂದ 3 ನೇ ಪ್ರತಿವಾದಿಯರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸುಳ್ಳು.

ನಿಪಿ.6 ಎಂದು ಗುರುತಿಸಲಾದ ಛಾಯಾ ಚಿತ್ರಗಳು ನಿಪಿ.9 ಕ್ಕೆ ಬಂದಾಯಿಸುವುದಿಲ್ಲ ಎಂದರೆ ಸರಿಯಲ್ಲ. ನಿಪಿ.6 ರಲ್ಲಿ ಕಾಣಿಸುವ ವಸ್ತುವನ್ನು ನಾನೇ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಒಬ್ಬ ಮಗ ಮತ್ತು ಒಬ್ಬಳು ಮಗಳು, ಆದರೆ ಆಕೆಯ ಮಗ ತೀರಿಕೊಂಡಿದ್ದಾನೆ. ಆಕೆಯ ಮಗ ಯಾವಾಗ ತೀರಿಕೊಂಡಿರುತ್ತಾನೆ ಎಂದು ನನಗೆ ನೆನಪಿಲ್ಲ. 1 ನೇ ಪ್ರತಿವಾದಿ ಅವರ ಮಗನನ್ನು ಪಾಲನೆ ಪೋಷಣೆ ಮಾಡುವುದರಲ್ಲೆ ಇದಿದ್ದರಿಂದ, ಅವರು ನಮಗೆ ತೊಂದರೆ ಕೊಡುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ ಎಂದರೆ ಸರಿಯಲ್ಲ.

ನಾನು ಮತ್ತು ನನ್ನ ಗಂಡ ಸಾಕಷ್ಟು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿದ್ದೇವೆ ಎಂದರೆ, ಘಟನೆ ನಡೆದ ಕಾರಣ, ದಾಖಲಿಸಿರುತ್ತೇವೆ ಎಂದು ನುಡಿಯುತ್ತಾರೆ. ನನಗೆ ಮತ್ತು ನನ್ನ ಗಂಡನಿಗೆ ಪ್ರತಿವಾದಿಯರ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸುವುದು ಹವ್ಯಾಸವಾಗಿದೆ ಎಂದರೆ ಸುಳ್ಳು. ನಾನು ಮತ್ತು ನನ್ನ ಗಂಡ 1 ಮತ್ತು 2 ನೇ ಪ್ರತಿವಾದಿಯರ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ದಾಖಲು ಮಾಡುವ ಪೂರ್ವದಲ್ಲೇ ಅವರು ನನ್ನ ಮತ್ತು ನನ್ನ ಗಂಡನ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ದಾಖಲು ಮಾಡಿದ್ದು , ಅವುಗಳು ಇದೆ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇವೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು, ನಾವು ದಾಖಲಿಸಿದ ನಂತರ, ಅವರು ದಾಖಲು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 1 ರಿಂದ 3 ನೇ ಪ್ರತಿವಾದಿಯರಿಗೆ ಭಯ ಹುಟ್ಟಿಸಬೇಕೆಂಬ ಕಾರಣದಿಂದ, ಈ ಸುಳ್ಳು ವ್ಯಾಜ್ಯವನ್ನು ಹೂಡಿರುತ್ತೇನೆ ಎಂದರೆ ಸುಳ್ಳು.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ 1 ರಿಂದ 3 ನೇ ಪ್ರತಿವಾದಿಯರ ಪರ ವಕೀಲರು ಸಮಯವಕಾಶ ಕೇಳಿದ್ದು ಸಮಯವಕಾಶ ನೀಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)**

ಓ ಹೆ ಕೇ ಸರಿ ಇದೆ.

**Sd/-**

**ಸಿವಿಲ್ ಜಡ್ಜ, ಮುಂಡಗೋಡ.**